**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.** PW-1

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 23.08.2024
ಪಾಟಿ ಸವಾಲು : 1 ನೇ ಪ್ರತಿವಾದಿ ಪರ ವಕೀಲರಿಂದ

ನಾನು ಓದಿರುವುದಿಲ್ಲ. ವಂಶವೃಕ್ಷವನ್ನು ಯಾರು ಹೇಳಿ ಬರೆಸಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಚನ್ನೇಗೌಡ ರವರು ಹೇಳಿ ಬರೆಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಚನ್ನೇಗೌಡ ರವರು ನನ್ನ ತಾತನ ಕಾಲದವರು ಇರುತ್ತಾರೆ. ಸದರಿ ಚನ್ನೇಗೌಡ ರವರು ಪ್ರಸ್ತುತ ತೀರಿಕೊಂಡಿರುತ್ತಾರೆ. ಸದರಿ ಚನ್ನೇಗೌಡರು ತೀರಿಕೊಂಡಾಗ ವಯಸ್ಸು ೮೦ ವರ್ಷ ಆಗಿರಬಹುದು. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಯಾವ ದಿನಾಂಕದಂದು ರಾಜಿ ಪಂಚಾಯಿತಿ ಆಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಯಾವುದೇ ರಾಜಿ ಪಂಚಾಯಿತಿ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ದೇವಸ್ಥಾನದ ದಕ್ಷಿಣ ದಿಕ್ಕಿಗೆ ನನ್ನ ತಂದೆಯಾದ ದೊಡ್ಡಕಾಳಯ್ಯ ರವರ ಜಮೀನು ಇರುತ್ತದೆ ಎಂದರೆ ಸರಿ. ನಮ್ಮ ಊರಿನಲ್ಲಿ ನಿಂತುಕೊಂಡರೆ ನನ್ನತಂದೆ ಜಮೀನು ಉತ್ತರ ದಿಕ್ಕಿಗೆ ಬರುತ್ತದೆ.

ಚಿಕ್ಕ ಕಾಳಯ್ಯ ರವರು ಸರೋಜಮ್ಮ ರವರಿಗೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಸರೋಜಮ್ಮ ರವರಿಗೆ ಮಾರಾಟ ಮಾಡಿದ ಜಮೀನಿನ ಉತ್ತರಕ್ಕೆ ಮರಿಬಸವಯ್ಯ ಬಿನ್ ಕುರಿ ಸಿದ್ದಯ್ಯ ರವರ ಹಾಗೂ ಚಂದಗಾಲು ಕೆಂಪಣ್ಣ ರವರ ಜಮೀನು ಬರುತ್ತದೆ ಎಂದರೆ ಸರಿ. ಸದರಿ ಜಮೀನುಗಳು ಆದ ನಂತರ ಉತ್ತರ ದಿಕ್ಕಿಗೆ ಬಸವಲಿಂಗಪ್ಪ ರವರ ಜಮೀನು ಇತ್ತು ಎಂದರೆ ಸರಿ. ಸದರಿ ಬಸವಲಿಂಗಪ್ಪ ರವರು ಅವರ ಜಮೀನನ್ನು ಪುಟ್ಟಸ್ವಾಮಿ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಬಸವ ಲಿಂಗಪ್ಪ ರವರ ಜಮೀನು ಆದ ನಂತರ ಕಲ್ಯಾಣಯ್ಯ ರವರ ಜಮೀನು ಬರುತ್ತದೆ ಎಂದರೆ ಸರಿ. ಸದರಿ ಕಲ್ಯಾಣಯ್ಯ ರವರ ಜಮೀನು ಆದ ನಂತರ ಸಿ.ಡಿ.ಎಸ್ ನಾಲೆ ಇರುತ್ತದೆ ಎಂದರೆ ಸರಿ.

ಬೀರೇಶ್ವರ ಸ್ವಾಮಿ ದೇವಸ್ಥಾನಕ್ಕೆ ಅರ್ಚಕರಾಗುತ್ತೇವೆಂದು ಊರಿನ ಗ್ರಾಮಸ್ಥರಾಗಲಿ ಅಥವಾ ಬೇರೆ ವ್ಯಕ್ತಿಗಳಾಗಲಿ ಪೈಪೋಟಿ ಮಾಡಲು ಬಂದಿರುತ್ತಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲವೆಂದು ನುಡಿಯುತ್ತಾರೆ.

ಚಿಕ್ಕಪ್ಪಗೌಡ ಬಿನ್ ಕಾಳಪ್ಪಗೌಡ ನನ್ನ ತಾತ ಇರುತ್ತಾರೆ. ನಿಪಿ.೫ ರಲ್ಲಿ ಮರಿಬಸಯ್ಯ ಬಿನ್ ಕುರಿಸಿದ್ದಪ್ಪ ರವರುಗಳ ಹೆಸರಿದ್ದು ಅದರಲ್ಲಿ ಪಿತ್ರಾರ್ಜಿತ ಮತ್ತು ಚೆನ್ನಯ್ಯನಿಂದ

ಮತ್ತು ಕುಳ್ಳಯ್ಯನಿಂದ ಕ್ರಯ ಎಂದು ಬರೆದಿರುತ್ತದೆ ಎಂದರೆ ಸರಿಯಲ್ಲ. ಮರಿಬಸಯ್ಯ ರವರು 1ನೇ ಪ್ರತಿವಾದಿಯ ತಾತ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1953-54 ರಿಂದ ಇಲ್ಲಿಯವರೆಗೂ 6 ಎಕರೆ 8 ಗುಂಟೆ ಜಮೀನು ಮರಿಬಸಯ್ಯ ರವರ ಹೆಸರಿನಲ್ಲಿಯೇ ಬರುತ್ತಿತ್ತು ಎಂದರೆ ಸರಿಯಲ್ಲ. ಪ್ರಸ್ತುತ 3 ಎಕರೆ 8 ಗುಂಟೆ ವಿರೂಪಾಕ್ಷ ರವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ.

ಬೀರೇಶ್ವರ ಸ್ವಾಮಿ ದೇವಸ್ಥಾನದ ಹೆಸರಿನಲ್ಲಿ ದಾವಾ ಸ್ವತ್ತು ಇರುವ ಬಗ್ಗೆ ಪಹಣಿ ಪತ್ರಿಕೆ ಅಥವಾ ಖಾತಾ ನೀಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಯರ ಹೆಸರಿಗೆ ಖಾತಾ ವರ್ಗಾವಣೆ ಆಗಿರುವ ಬಗ್ಗೆ ನೀವಾಗಲಿ ಅಥವಾ ನಿಮ್ಮ ತಂದೆಯವರಾಗಲಿ ಸಕ್ಷಮ ಪ್ರಾಧಿಕಾರದ ಮುಂದೆ ಅದನ್ನು ಪ್ರಶ್ನೆ ಮಾಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಕರದಾ ಪ್ರತಿಯನ್ನು ಹೊರತುಪಡಿಸಿ ಬೇರೆ ಯಾವುದೇದಾಖಲೆಯಲ್ಲಿ ದೇವಸ್ಥಾನದ ಹೆಸರು ಇರುವುದಿಲ್ಲ ಎಂದರೆ ಸರಿ.

ಸಾಮಾನ್ಯವಾಗಿ ಊರಿನಲ್ಲಿ ದಾರೆ ಹೊಲ, ಕುಲವಾಡಿ ಹೊಲ, ಏರಿಕೆಳಗಿನ ಹೊಲ ಎಂದು ಹೆಸರನ್ನು ಕಟ್ಟುತ್ತಾರೆ ಎಂದರೆ ಸರಿ. ಅದೇ ರೀತಿ ಬೀರೇಶ್ವರ ದೇವಸ್ಥಾನ ಇದ್ದ ಕಾರಣ ಅದರ ಸುತ್ತಾ ಮುತ್ತ ಇದ್ದ ಹೊಲಗಳಿಗೆ ಬೀರೇದೇವರ ಹೊಲ ಎಂದು ಕರೆಯುತ್ತಿದ್ದರು ಎಂದರೆ ಸರಿ. ಕರದ ಕಾಫಿಯಲ್ಲಿರುವ ದೇವಸ್ಥಾನದ ಹೆಸರನ್ನು ನೆಪವಾಗಿಟ್ಟುಕೊಂಡು ಪ್ರತಿವಾದಿಯರ ಅಸ್ತಿಯು ದೇವಸ್ಥಾನಕ್ಕೆ ಸೇರಬೇಕೆಂದು ನಾನು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೊದಲಿಗೆ ದೇವಸ್ಥಾನ ಇದ್ದ ಚಿನ್ನೇನಹಳ್ಳಿ ಗ್ರಾಮದಲ್ಲಿ ವಾಸವಿದ್ದೇನು ಎಂದರೆ ಸರಿ. ಇತ್ತೀಚೆಗೆ ತಾಳಶಾಸನ ಗ್ರಾಮದಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ. ಪ್ರತಿವಾದಿ-10 ರಿಂದ 14 ರವರುಗಳು ದೇವಸ್ಥಾನದ ಸುತ್ತಮುತ್ತ ಜಮೀನುಗಳನ್ನು ಹೊಂದಿರುವುದಿಲ್ಲ. ಅದೇ ರೀತಿ ವಾದಿ 2 ರಿಂದ 5 ರವರುಗಳು ಸಹ ದೇವಸ್ಥಾನದ ಸುತ್ತಮುತ್ತ ಜಮೀನನ್ನು ಹೊಂದಿರುವುದಿಲ್ಲ. ಪ್ರತಿವಾದಿಯರಿಗೆ ಸೇರಿದ ಪಿತ್ರಾರ್ಜಿತ ಆಸ್ತಿಗಳನ್ನು ಲಪಟಾಯಿಸುವ ಉದ್ದೇಶದಿಂದ ನಾನು ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸ್ವಾಧೀನದಲ್ಲಿರುವ ಬಗ್ಗೆ ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.